
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ಕ್ರೋಧಿ ನಾಮ ಸಂವತ್ಸರ

ಪುಟ : ೪ ಸಂಪುಟ : ೭೦ ಸಂಚಿಕೆ : ೧೧

**15-11-2024 ಕಾರ್ತಿಕ ಮಾಸ : ಶುಕ್ಲ ಪಕ್ಷ ಶುಕ್ರವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಗಳವರು, ಶ್ರೀಕ್ಷೇತ್ರ ಹೊಂಬುಜ


### ಅತಿಶಯ ಶ್ರೀಕ್ಷೇತ್ರ ಹೊಂಬುಜ

## "ಇಂದ್ರಧ್ವಜ ಮಹಾಮಂಡಲ ವಿಧಾನ" ಆರಂಭ



**ಹೊಂಬುಜ :** ಚಾತುರ್ಮಾಸದ ಅಷ್ಟಾಹ್ನಿಕ ಪರ್ವದ ನಿಮಿತ್ತ ಪ್ರಪ್ರಥಮ ಬಾರಿಗೆ ಹೊಂಬುಜದ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿಶ್ರೀ ಪದ್ಮಾವತಿ ದೇವಿ ಮಹಾಸನ್ನಿಧಿಯಲ್ಲಿ ಬೆಳಿಗ್ಗೆ 7 ಗಂಟೆಗೆ ಇಂದ್ರಪ್ರತಿಷ್ಠೆ, ಅಗ್ರೋದಕ, ಧ್ವಜಾರೋಹಣ, ನಿತ್ಯಾಭಿಷೇಕ ನೆರವೇರಿಸುವ ಮೂಲಕ "ಇಂದ್ರಧ್ವಜ ಮಹಾಮಂಡಲ ವಿಧಾನ"ವು ಜಿನಾಗಮೋಕ್ತ ಶಾಸ್ತ್ರದನ್ವಯ ಆರಂಭವಾಯಿತು. ಪಾಲ್ಗೊಳ್ಳುವ ಭಕ್ತರು ಶ್ರಾವಕ-ಶ್ರಾವಿಕೆಯರು ಪೂಜಾದ್ರವ್ಯಗಳೊಂದಿಗೆ ವಿಧಾನ ಮಂಟಪದ ಪ್ರವೇಶ ಮಾಡಿದರು.

2ನೇ ಪುಟಕ್ಕೆ

WWW.HOMBUJAPADMAVATI.ORG

### ಇಂದ್ರಧ್ವಜ ಮಹಾಮಂಡಲ ವಿಧಾನ-ಶ್ರವಣಬೆಳಗೊಳ ಶ್ರೀಗಳ ಪ್ರಥಮ ಪುರಪ್ರವೇಶ

## "ತ್ರಿಕರಣಪೂರ್ವಕ ಆರಾಧನೆಯೇ ಭಕ್ತಿ ಇಂದ್ರಧ್ವಜ ಮಹಾಮಂಡಲ ವಿಧಾನ ಸರ್ವರಿಗೂ ಕ್ಷೇಮವಾಗಲಿ"

-ಶ್ರವಣಬೆಳಗೊಳ ಶ್ರೀ



**ಹೊಂಬುಜ (17-11-24) :** ದೇವರ ಪೂಜೆ ಮತ್ತು ಜಿನಾಗಮೋಕ್ತ ಆರಾಧನೆ ಜೈನ ಧರ್ಮದ ಪ್ರಾಚೀನ ಸಂಪ್ರದಾಯವಾಗಿದೆ ಎಂದು ಶ್ರವಣಬೆಳಗೊಳ ಶ್ರೀಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮಿಗಳವರು ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಆಯೋಜಿಸಲ್ಪಟ್ಟ ಇಂದ್ರಧ್ವಜ ಮಹಾಮಂಡಲ ವಿಧಾನ ಪೂಜಾ ದಿನದ 5ನೇ ದಿನದಂದು ತಿಳಿಸಿದರು.

ಪ್ರಪ್ರಥಮ ಬಾರಿಗೆ ಏರ್ಪಡಿಸಿದ ಆರಾಧನೆಯಿಂದ ಸರ್ವರಿಗೂ ಕ್ಷೇಮವುಂಟಾಗಲಿ ಎಂದು ತಮ್ಮ ಪ್ರವಚನದಲ್ಲಿ ಹೇಳಿ ತ್ರಿಕರಣಪೂರ್ವಕ ಆರಾಧನೆಯೇ ಭಕ್ತಿ ಎಂದು ಧರ್ಮ ನಿಷ್ಠೆಯ ಬಗ್ಗೆ ವಿವರಿಸಿದರು. ಹೊಂಬುಜ ಶ್ರೀಗಳವರು ಶ್ರವಣಬೆಳಗೊಳ ಶ್ರೀಮಠದ ಪೂರ್ವ ಭಟ್ಟಾರಕರಾಗಿದ್ದ ಕರ್ಮಯೋಗಿ ಚಾರುಕೀರ್ತಿ ಮಹಾಸ್ವಾಮಿಗಳವರ ಸ್ಮರಣೆ ಮಾಡುತ್ತಾ, ಅಭಿನವ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು ಅವರಿಂದ ದೀಕ್ಷಿತರಾಗಿ, ಅಲ್ಪಸಮಯದಲ್ಲಿ ಧಾರ್ಮಿಕ, ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಅಭಿನಂದನಾರ್ಹರು ಎಂದು ಶ್ರೀಗಳವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಿದರು.

2ನೇ ಪುಟಕ್ಕೆ

### ಧಾರ್ಮಿಕ ಸಭೆ-ಅಂಚೆ ಚೀಟಿ ಲೋಕಾರ್ಪಣೆ


## "ತ್ಯಾಗ-ಅಹಿಂಸೆ ಜೈನಧರ್ಮ ಸಾರ"

-ಡಾ. ಡಿ. ವೀರೇಂದ್ರ ಹೆಗ್ಗಡೆ



**ಹೊಂಬುಜ :** ಜೈನ ಧರ್ಮಸಾರ ಪ್ರಸಾರಕ ಶ್ರೀ ಶಾಂತಿಸಾಗರ ಮುನಿವರ್ಯರವರು ವಿಶ್ವದಲ್ಲಿ ಮಾನವತಾ ಮೌಲ್ಯಗಳನ್ನು ಜನಸಾಮಾನ್ಯರಿಗೂ ಮನನ ಮಾಡುವಂತೆ ಉಪದೇಶಿಸಿದ್ದಾರೆ. ಆಚಾರ್ಯ ಶ್ರೀ 108 ಶಾಂತಿಸಾಗರ ಮುನಿಮಹಾರಾಜರ ಆಚಾರ್ಯ ಪದಾರೋಹಣ ಶತಮಾನೋತ್ಸವದ ಸ್ಮರಣಾರ್ಥ ಭಾರತೀಯ ಅಂಚೆ ಇಲಾಖೆಯು ವತಿಯಿಂದ ಬಿಡುಗಡೆಗೊಂಡಿರುವ ಅಂಚೆ ಚೀಟಿ, ವಿವರ, ಪ್ರಥಮ ದಿವಸ ಲಕೋಟೆಯು ಐತಿಹಾಸಿಕವಾಗಿ ದಾಖಲಾಗುತ್ತದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಶ್ರೀ ಶಾಂತಿಸಾಗರ ಮುನಿವರ್ಯರ ಭಾವಚಿತ್ರವಿರುವ ಅಂಚೆ ಚೀಟಿ ಲೋಕಾರ್ಪಣೆಗೊಳಿಸಿದ ಸಂದರ್ಭದಲ್ಲಿ ಹೇಳಿದರು.


2ನೇ ಪುಟಕ್ಕೆ



ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಶ್ರೀಕ್ಷೇತ್ರ ಹೊಂಬುಜದಲ್ಲಿ ನಡೆದ ಇಂದ್ರಧ್ವಜ ಮಹಾಮಂಡಲ ವಿಧಾನದಲ್ಲಿ 458 ಮೂರ್ತಿಗಳು ಹಾಗೂ ಇನ್ನಿತರೆ ಪಂಚಮೇರು ಮತ್ತು ನಂದೀಶ್ವರ ದ್ವೀಪ ಪ್ರತಿಮೆಗಳನ್ನು ಇಟ್ಟು ಪೂಜೆ ಮಾಡಲಾಯಿತು. ಮಂಡಲದ ರಚನೆ ಹಾಗೂ ಪೂಜಾ ಆರಾಧನೆಯು ಸಂಯೋಜನೆಯಲ್ಲಿ ಶ್ರೀಕ್ಷೇತ್ರ ಅರಿಹಂತಗಿರಿ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಹಾಗೂ ಶ್ರೀಕ್ಷೇತ್ರ ಸೋಂದಾ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ವಿಶೇಷ ಸಹಕಾರ ನೀಡಿದಕ್ಕೆ ಕೃತಜ್ಞತೆಯನ್ನು ಸಲ್ಲಿಸಲಾಯಿತು.

ಶ್ರೀಕ್ಷೇತ್ರ ಹೊಂಬುಜ ಜೈನಮಠದಲ್ಲಿ ದಿನಾಂಕ 13-11-2024 ರಿಂದ 20-11-2024ರವರೆಗೆ 8 ದಿನಗಳ ಕಾಲ ನಡೆದ ಇಂದ್ರಧ್ವಜ ಮಹಾಮಂಡಲ ವಿಧಾನ ಕಾರ್ಯಕ್ರಮಕ್ಕೆ ದೇಶ-ವಿದೇಶ ಹಾಗೂ ರಾಜ್ಯದ ನಾನಾ ಭಾಗಗಳಿಂದ ಧರ್ಮ ಬಾಂಧವರು ಆಗಮಿಸಿ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡಿರುತ್ತೀರಿ. ಈ ಧರ್ಮಪ್ರಭಾವನಾ ಕಾರ್ಯಕ್ಕೆ ತಾವೆಲ್ಲರೂ ಭಾಗಿಯಾಗಿ ಧರ್ಮಧ್ವಜವನ್ನೇರಿಸಿ ಭಗವಂತರ ಕೃಪೆಗೆ ಪಾತ್ರರಾಗಿದ್ದೀರಿ. ಇನ್ನು ಮುಂದೆಯೂ ತಮ್ಮ ಧರ್ಮಪ್ರಭಾವನಾ, ಆತ್ಮಪ್ರಭಾವನಾ ಕಾರ್ಯವು ಹೀಗೆ ಮುಂದುವರೆಯಲೆಂದು ಹರಸುತ್ತೇವೆ.

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ
ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು
ಶ್ರೀ ಕ್ಷೇತ್ರ ಹೊಂಬುಜ



## ಹೊಂಬುಜದಲ್ಲಿ ಲಕ್ಷದೀಪೋತ್ಸವ

# "ದೀಪೋತ್ಸವದಿಂದ ಜೀವನೋತ್ಸವ ವೃದ್ಧಿ"

–ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು





**ಹೊಂಬುಜ :** ಹೊಂಬುಜದ ಭ. ಶ್ರೀ 1008 ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಲಕ್ಷದೀಪೋತ್ಸವವು ನವೆಂಬರ್ 20 ರಂದು ರಾತ್ರಿ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ನೆರವೇರಿತು. ನಗರದಲ್ಲಿ ದೀಪಗಳಿಂದ ಅಲಂಕೃತವಾದ ರಜತ ಪಲ್ಲಕ್ಕಿ ಹಾಗೂ ರಥಪಟ ವಾದ್ಯಗೋಷ್ಠಿಗಳಿಂದ ನೆರವೇರಿತು.


ಪರಮಪೂಜ್ಯ ಸ್ವಸ್ತಿಶ್ರೀಗಳವರ ದಿವ್ಯ ನೇತೃತ್ವದಲ್ಲಿ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತಿ ದೇವಿ ಜಿನಾಲಯಗಳಲ್ಲಿ ಭಕ್ತರು ದೀಪ ಬೆಳಗಿಸಿದರು. ಮಾನಸ್ತಂಭ, ಧ್ವಜಸ್ತಂಭ, ಚಂದ್ರಶಾಲೆ, ಶ್ರೀಮಠಗಳಲ್ಲಿ ಮಣ್ಣಿನ ಹಣತೆಗಳು, ಬೆಳಕು ನೀಡಿದವು. ಮಕ್ಕಳು, ಹಿರಿಯರು ದೀಪ–ದೀಪಗಳ ಸಾಲುಗಳನ್ನು ಬೆಳಗಿಸುತ್ತಿದ್ದ ದೃಶ್ಯ ಮನಮೋಹಕವಾಗಿತ್ತು.

ಪೂಜ್ಯ ಸ್ವಾಮೀಜಿಯವರು **"ದೀಪಗಳಿಂದ ದೀಪೋತ್ಸವ ಆಚರಣೆಯು ಧಾರ್ಮಿಕ ವಿಧಿಯೂ ಆಗಿದೆ"** ಎನ್ನುತ್ತಾ **ದೀಪೋತ್ಸವದಿಂದ ಜೀವನೋತ್ಸವ ವೃದ್ಧಿ ಆಗುತ್ತದೆ** ಎಂದು ವಿವರಿಸಿದರು. ಗಜರಾಣಿ ಐಶ್ವರ್ಯ, ಅಶ್ವ ಮಾನವಿ, ನಗರ ಸಂಚಾರದಲ್ಲಿ ಭಕ್ತರಿಗೆ ಮುದ ನೀಡಿತ್ತು. ಊರ–ಪರವೂರ ಭಕ್ತರು ಧನ್ಯರಾದರು.

## ಶ್ರೀಮಹಾವೀರ ತೀರ್ಥಂಕರರ 2551ನೇ ನಿರ್ವಾಣೋತ್ಸವ

# "ಜಗತ್ತಿನೆಲ್ಲೆಡೆ ಅಹಿಂಸಾಭಾವದ ಜೀವನವೇ ಶ್ರೇಷ್ಠ"

–ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



WWW.HOMBUJAPADMAVATI.ORG

**ಹೊಂಬುಜ : ಅಂತಿಮ ತೀರ್ಥಂಕರರಾದ ಶ್ರೀ ಮಹಾವೀರ ಸ್ವಾಮಿಯವರು ಜೈನ ಧರ್ಮದ ತತ್ವ, ಸಿದ್ಧಾಂತಗಳನ್ನು ಸರಳವಾಗಿ ಭಾರತ ದೇಶದೆಲ್ಲೆಡೆ ಪ್ರಸಾರ ಮಾಡಿದರು. ಅವರ ಉಪದೇಶವು ಪ್ರಾಣಿ ಹಿಂಸೆ, ಮಾನವ ಸಂಘರ್ಷ, ಅಸ್ಪ್ರಶ್ಯತೆಯ ಸಂಧಿಗ್ಧತೆಗಳನ್ನು ತೊಡೆದು ಹಾಕಿದ್ದು, ಗಣರಾಜ್ಯ ಮಾದರಿಯಲ್ಲಿ ಪ್ರಥಮವಾಗಿ ಅಹಿಂಸಾ ಭಾರತ ಸಾಮರಸ್ಯ ಸಮಾಜ ನಿರ್ಮಾಣ ಮಾಡಿದರು** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಪ್ರವಚನದಲ್ಲಿ ತಿಳಿಸಿದರು. ಅವರು ಶ್ರೀ 1008 ಪಾರ್ಶ್ವನಾಥ ಸ್ವಾಮಿ ಸನ್ನಿಧಿಯಲ್ಲಿ ಶ್ರೀ ಮಹಾವೀರ ತೀರ್ಥಂಕರರ 2551ನೇ ನಿರ್ವಾಣ ಸುದಿನದ ಪ್ರಯುಕ್ತ ಪ್ರಾತಃ ಕಾಲ ಜಿನಾಗಮೋಕ್ತ ವಿಧಿ–ವಿಧಾನಗಳ ಪೂಜೆಯನ್ನು ನೆರವೇರಿಸಿದರು.

ಪ್ರಸಕ್ತ ಜೀವನದ ಸಂಕೀರ್ಣ ಸಮಸ್ಯೆಗಳಿಗೆ, ದೇಶವ್ಯಾಪ್ತಿ ಸಂಘರ್ಷಗಳಿಗೆ ಹಾಗೂ ವಿಶ್ವದ ನಾನಾ ಭಾಗದಲ್ಲಿ ಸಂಭವಿಸುವ ಅಮಾನವೀಯ ಕೃತ್ಯಗಳಿಗೆ ವರ್ಧಮಾನ ಶ್ರೀ ಮಹಾವೀರ ತೀರ್ಥಂಕರರ ಉಪದೇಶಗಳು ಪರಿಹಾರ ಮಾರ್ಗೋಪಾಯಗಳನ್ನು ತಿಳಿಸಿವೆಯೆಂದು ಅವಲೋಕಿಸಿ ಸರ್ವತ್ರ ಅಹಿಂಸಾಭಾವದ ಜೀವನ ಶ್ರೇಷ್ಠ ಎಂಬ ವಿಚಾರವನ್ನು ಮನನ ಮಾಡುವಂತೆ ಹೇಳಿದರು. ನಿರ್ವಾಣ ಲಾಡು ವಿತರಿಸಿ, ಶ್ರೀಗಳವರು ಭಕ್ತವೃಂದದವರಿಗೆ ಶ್ರೀ ಮಂತ್ರಾಕ್ಷತೆ ನೀಡಿ ಹರಸಿದರು.

ಭಕ್ತರು ಅರ್ಘ್ಯವನ್ನು ಸಮರ್ಪಿಸುತ್ತಾ ಜಿನಸ್ತೋತ್ರ, ಭಜನೆ ಸ್ತುತಿಸಿದರು. ಶ್ರೀ ನೇಮಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀಕ್ಷೇತ್ರಪಾಲ ಸನ್ನಿಧಿಯಲ್ಲಿ ಪೂಜೆ ನೆರವೇರಿತು. ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ದೀಪಾವಳಿ ನಿಮಿತ್ತ ವಿಶೇಷ ಧಾರ್ಮಿಕ ಪೂಜಾ ವಿಧಿಗಳು ಜರುಗಿತು.

## ಶ್ರೀಕ್ಷೇತ್ರ ಹೊಂಬುಜದಲ್ಲಿ ಹೊಸತೊಡಕು ಪೂಜೆ

# "ಇಳೆಯ ಬೆಳೆ ಚಿನ್ನಕ್ಕಿಂತಲೂ ಮಿಗಿಲು–ಭೂ ಒಡಲ ಸಾರಸತ್ವದಿಂದ ಸ್ವಾಸ್ಥ್ಯ ಆಹಾರ"

–ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭತ್ತ ಬೆಳೆಯುವ ಹೊಲದಿಂದ ಬೆಳೆದು ನಿಂತ ಪೈರು ಕಟಾವು ಮಾಡುವ ಮೊದಲು ತೆನೆಯನ್ನು ಪೂರ್ವ ಪರಂಪರೆಯಂತೆ ಭೂತಾಯಿಗೆ ಪೂಜೆ ಸಲ್ಲಿಸಿ, ತೆನೆಯನ್ನು ಶ್ರೀಕ್ಷೇತ್ರದ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಗೆ ತರಲಾಯಿತು. ಶ್ರೀಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಸಾಂಪ್ರದಾಯಿಕವಾಗಿ ತೆನೆಯನ್ನು ದೇವರ ಸಾನಿಧ್ಯದಲ್ಲಿ ಧಾರ್ಮಿಕ ವಿಧಿ ಪೂರ್ವಕ ಸಮರ್ಪಿಸಿದರು.

**'ಇಳೆಯ ಬೆಳೆ ಚಿನ್ನಕ್ಕಿಂತಲೂ ಮಿಗಿಲಾದ ಸಂಪತ್ತಾಗಿದೆ. ಜೀವ ಜಗತ್ತಿಗೆ ಆಹಾರ ಒದಗಿಸಿ, ಪೋಷಿಸುವ ಭತ್ತ, ಧಾನ್ಯಾದಿ, ತರಕಾರಿ, ಹಣ್ಣು ಹಂಪಲು ಮುಂತಾದ ಬೆಳೆಗಳು ಭೂಮಿಯ ಒಡಲಿನ ಸಾರಸತ್ವದ ಪೋಷಕಾಂಶದಿಂದ ಫಲ ನೀಡುತ್ತವೆ'** ಎಂದು ಶ್ರೀಗಳು ತಿಳಿಸುತ್ತಾ **'ಆರೋಗ್ಯದಾಯಕ ಆಹಾರಕ್ಕಾಗಿ ಬೆಳೆದ ಬೆಳೆಗಳು ಸಾತ್ವ್ಯವಾದುದು. ರಸಾಯನಿಕ ಪೋಷಕಾಂಶ, ಕೀಟನಾಶಕ ಬಳಸದೇ ಸಹಜ ಸ್ವಾಭಾವಿಕ ಸಾವಯವ ಕೃಷಿ ಪದ್ಧತಿಯು ಭಾರತೀಯ ವಿಶಿಷ್ಟ ಭೂಮಿಯನ್ನು ಸದ್ವಿನಿಯೋಗಪಡಿಸಿ ಸಾತ್ವ್ಯ ಬೆಳೆಗಳನ್ನು ಬೆಳೆಸುವಂತಾಗಬೇಕೆಂದು'** ಪ್ರವಚನದಲ್ಲಿ ತಿಳಿಸಿದರು.

# "ಇಂದ್ರಧ್ವಜ ಮಹಾಮಂಡಲ ವಿಧಾನ"



ಅರಹಂತಗಿರಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರಿಗೆ "ಜೈನಾಗಮಭೂಷಣ" ಗೌರವ ಸಮರ್ಪಣೆ



ಕಂಬದಹಳ್ಳಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರಿಗೆ "ಜೈನ ವಿದ್ಯಾಭೂಷಣ" ಗೌರವ ಸಮರ್ಪಣೆ



WWW.HOMBUJAPADMAVATHI.ORG



ಕನಕಗಿರಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರಿಗೆ "ಜೈನ ತತ್ವ ಭೂಷಣ" ಗೌರವ ಸಮರ್ಪಣೆ.



ಮೂಡುಬಿದಿರೆ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಯವರಿಗೆ "ಜೈನ ಪ್ರಭಾವನಾ ಭೂಷಣ" ಗೌರವ ಸಮರ್ಪಣೆ



ಕಾರ್ಕಳ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಧ್ಯಾನಗುರು ಲಲಿತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರಿಗೆ "ಭಟ್ಟಾರಕ ಭೂಷಣ" ಗೌರವ ಸಮರ್ಪಣೆ.



ಶ್ರವಣಬೆಳಗೊಳ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಗಳವರಿಗೆ ಗೌರವ ಸಮರ್ಪಣೆ.



ಅಭಿಷೇಕ



ರಥೋತ್ಸವ

WWW.HOMBUJAPADMAVATI.ORG



ವಿಧಾನಮಂಟಪ




ಜಾಪ್ಯಾರತಿ




ಆತ್ಮನನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿ ಉಪಯೋಗ ಹೋಗುವುದು ಪ್ರಕೃತಿ ಅಲ್ಲ ವಿಕೃತಿ ಇದೆ,

## ಮಲೆನಾಡು ವಿಭಾಗ ಮಟ್ಟದ ಜಿನಭಜನೆ ಸ್ಪರ್ಧೆ-2024 ಆಮಂತ್ರಣ ಪತ್ರಿಕೆ ಬಿಡುಗಡೆ



**ಹೊಂಬುಜ:** ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ನಡೆಯುತ್ತಿರುವ 'ಇಂದ್ರಧ್ವಜ ಮಹಾಮಂಡಲ ವಿಧಾನ' ದ ಪೂಜಾ ಬಳಿಕ ಮಲೆನಾಡು ವಿಭಾಗ ಮಟ್ಟದ ಜಿನಭಜನಾ ಸ್ಪರ್ಧೆ-2024, 8ನೇ ಆವೃತ್ತಿ ಸ್ಪರ್ಧೆಯ ಆಮಂತ್ರಣ ಪತ್ರಿಕೆಯನ್ನು ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಅಧ್ಯಕ್ಷರಾಗಿರುವ ಧರ್ಮಸ್ಥಳದ ಡಿ. ಸುರೇಂದ್ರ ಕುಮಾರ್‌ರವರು ಬಿಡುಗಡೆಗೊಳಿಸಿದರು.

ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು, ಕನಕಗಿರಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ಉಪಸ್ಥಿತಿಯಲ್ಲಿ ಬಿಡುಗಡೆಗೊಂಡಿದ್ದು, ಜಿನಭಜನೆ ಸ್ಪರ್ಧೆಯ ಅತ್ಯಧಿಕ ತಂಡದವರು ಭಾಗವಹಿಸುವಂತಾಗಲಿ ಎಂದು ಹರಸಿದರು.

ಡಿಸೆಂಬರ್ 8, 2024 ಭಾನುವಾರದಂದು ಹೊಂಬುಜ ಶ್ರೀ ಪದ್ಮಾವತಿ ಜೈನ ಸಮುದಾಯ ಭವನದಲ್ಲಿ ಬೆಳಿಗ್ಗೆ 9.30 ಗಂಟೆಗೆ ಉದ್ಘಾಟನೆಗೊಳ್ಳಲಿದೆ. ರಾಷ್ಟ್ರೀಯ ಜೈನ ಮಿಲನ್ ವಲಯ-8, ಮಲೆನಾಡು ವಿಭಾಗದ ಉಪಾಧ್ಯಕ್ಷರಾದ ಯಶೋಧರ ಹೆಗ್ಡೆಯವರು, ಜಿನಭಜನಾ ಕೇಂದ್ರ ಸಮಿತಿ ಸಂಯೋಜಕ ಪಿ. ಅಜಿತಕುಮಾರ್ ಉಪಸ್ಥಿತರಿದ್ದರು.

## "ಗುರುಕುಲ ಶಿಕ್ಷಣವೇ ಶ್ರೇಷ್ಠವಾದುದು: ಧಾರ್ಮಿಕ ಸಂಸ್ಕಾರ ವಿದ್ಯಾಭ್ಯಾಸ ಜೀವನದಲ್ಲಿ ಶ್ರೇಯಸ್ಸಿಗೆ ದಾರಿ"

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



**ಹೊಂಬುಜ (ಅ. 16) :** ಗುರುಕುಲ ಶಿಕ್ಷಣವು ಭಾರತೀಯ ನೈಜ ಶಿಕ್ಷಣ ಪದ್ಧತಿಯಾಗಿದೆ. ಶ್ರವಣಬೆಳಗೊಳದಲ್ಲಿ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಮಹಾಸ್ವಾಮಿಗಳವರು ನೂರಾರು ವರ್ಷಗಳಿಂದ ಉತ್ತಮ ಪರಂಪರೆಗೆ ಗುರುಕುಲದ ಶ್ರೇಷ್ಠತೆಯನ್ನು ಸಾರಿದವರು ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಜೈನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಶ್ರವಣಬೆಳಗೊಳ ಜೈನ ಮಠದ ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠದ ಬ್ರಹ್ಮಚರ್ಯ ಆಶ್ರಮ ಹಾಗೂ ಶ್ರೀ ಕಾಳಲದೇವಿ ಕನ್ಯಾಶ್ರಮದಲ್ಲಿ ವಿದ್ಯಾರ್ಜನೆ ಮಾಡುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರವಚನದಲ್ಲಿ ತಿಳಿಸಿದರು.

ಗುರುಕುಲ ಶಿಕ್ಷಣದಿಂದ ಧಾರ್ಮಿಕ ಸಂಸ್ಕಾರರ ಮತ್ತು ಐಚ್ಛಿಕ ವಿದ್ಯಾಭ್ಯಾಸವು ಅತ್ಯುತ್ತಮವಾದುದು. ಶೈಕ್ಷಣಿಕ ಪ್ರಗತಿಯಿಂದ ಉತ್ತಮ ಹುದ್ದೆಯನ್ನಲಂಕರಿಸುವ ಭಾಗ್ಯ ಲಭಿಸುವುದು. ಉತ್ತಮ ಭಾವನೆಗಳಿಂದ ಜೀವನದಲ್ಲಿ ಶ್ರೇಯಸ್ಸು ನಿಶ್ಚಿತವಾಗಿ ದೊರಕುವುದು" ಎಂದು ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಹರಸಿ, ಆಶೀರ್ವದಿಸಿದರು. ಜೈನ ಧರ್ಮದ ಸಿದ್ಧಾಂತ, ಮುನಿಶ್ರೀಗಳ ಉಪದೇಶಗಳ ಕುರಿತು ವಿವರಿಸಿದರು.

ಶ್ರೀಕ್ಷೇತ್ರ ಶ್ರವಣಬೆಳಗೊಳದ ಪುಷ್ಪರಾಜ ಜೈನ, ವೃಷಭರಾಜ್, ಮಹೇಶ್ ಶಾಸ್ತ್ರಿಯವರು ವಿದ್ಯಾರ್ಥಿಗಳೊಂದಿಗೆ ಶ್ರೀ ಕ್ಷೇತ್ರ ಹೊಂಬುಜದ ಶ್ರೀ ನೇಮಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಅಧಿನಾಯಕ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಅಭೀಷ್ಟವರಪ್ರದಾಯಿನಿ ಯಕ್ಷಿ ಶ್ರೀ ಪದ್ಮಾವತಿ ದೇವಿ, ಶ್ರೀ ಕ್ಷೇತ್ರಪಾಲ ಸ್ವಾಮಿ ತ್ರಿಕೂಟ ಜಿನಾಲಯ, ಪಂಚಬಸದಿ, ಬೋಗಾರ ಬಸದಿ, ಶ್ರೀಮಹಾವೀರ ಮಂದಿರ, ನಗರ ಜಿನಾಲಯ ದರ್ಶನ ಪಡೆದರು. ಐತಿಹಾಸಿಕ ಮುತ್ತಿನಕೆರೆ ವೀಕ್ಷಿಸಿದರು.

### ಶ್ರೀಕ್ಷೇತ್ರ ಹೊಂಬುಜದಲ್ಲಿ ಪ್ರಾಕೃತ ಸಂವೇದನಾ ಗೋಷ್ಠಿ

## "ಶಾಸ್ತ್ರೀಯ ಭಾಷೆಯಾಗಿ ಪ್ರಾಕೃತ ಭಾಷೆಗೆ ಮಾನ್ಯತೆ" ಕೇಂದ್ರ ಸರಕಾರದ ಸಹಯೋಗ ಶ್ಲಾಘನೀಯ

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



**ಹೊಂಬುಜ :** ಪ್ರಾಚೀನ ಪ್ರಾಕೃತ ಭಾಷೆಗೆ ಕೇಂದ್ರ ಸರಕಾರವು ಶಾಸ್ತ್ರೀಯ ಭಾಷೆಯೆಂದು ಮನ್ನಣೆ-ಮಾನ್ಯತೆ ನೀಡಿರುವುದಕ್ಕಾಗಿ ಭಾರತದ ಪ್ರಧಾನಿ ಗೌರವಾನ್ವಿತ ನರೇಂದ್ರ ಮೋದಿಯವರಿಗೆ ಹೊಂಬುಜ ಅತಿಶಯ ಶ್ರೀಕ್ಷೇತ್ರದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿರುವರು.

**"ಜೈನ ಶಾಸ್ತ್ರದ ಸಿದ್ಧಾಂತ ತತ್ವ ಗ್ರಂಥಗಳೆಲ್ಲವೂ ಪ್ರಾಕೃತ ಭಾಷೆಯಲ್ಲಿದ್ದು, ಜೈನ ಸಮಾಜದ ವತಿಯಿಂದ ಪ್ರಾಕೃತ ವಿದ್ವಾಂಸರು ರಾಷ್ಟ್ರದಲ್ಲಿ ಶಾಸ್ತ್ರೀಯ ಭಾಷೆಯ ಅಧೀಕೃತ ಮಾನ್ಯತೆ ನೀಡಿರುವುದಕ್ಕಾಗಿ ಸಂತಸಗೊಂಡಿರುವರು"** ಎಂದು ತಿಳಿಸುತ್ತಾ **"ಪ್ರಾಕೃತ ಭಾಷೆಯ ಸಂಶೋಧನೆ, ಅಧ್ಯಯನಕ್ಕಾಗಿ ಕೇಂದ್ರ ಸರಕಾರವು ಪ್ರೇರಣೆ ನೀಡಿರುವುದು ಶ್ಲಾಘನೀಯ"** ಎಂದರು.

ಪ್ರಾಕೃತ ವಿದ್ವಾಂಸರಾದ ಪುಣೆಯ ಡಾ. ಕೆ.ಕೆ. ಜೈನ್, ಶ್ರವಣಬೆಳಗೊಳದ ಡಾ. ಎನ್. ಸುರೇಶಕುಮಾರ್, ಡಾ. ಜ್ವಾಲಾ ಸುರೇಶ, ಡಾ. ರಮೇಶ ಪಾಟೀಲ್, ಸೊಲ್ಲಾಪುರದ ಡಾ. ಮಹಾವೀರ ಶಾಸ್ತ್ರಿ ಇನ್ನಿತರ ವಿದ್ವಾಂಸರು ಉಪಸ್ಥಿತರಿದ್ದರು.

### ಪದವಿ ಮಹಾವಿದ್ಯಾಲಯ ಪ್ರಾರಂಭೋತ್ಸವ, ಕಾಲೇಜಿನ ನೂತನ ಕಟ್ಟಡ ಹಾಗೂ ವಸತಿ ಗೃಹಗಳ ಉದ್ಘಾಟನಾ ಸಮಾರಂಭ

## "ಶೈಕ್ಷಣಿಕ ಕ್ಷೇತ್ರದಲ್ಲಿ ನಿಲಜಗಿ ಕುಟುಂಬ ಅದಮ್ಯ ಸಾಧನೆ"

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



ಹುಕ್ಕೇರಿ : ಲಾಭದ ಮೂಲ ಉದ್ದೇಶ ಹೊಂದಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಿರುವ ಇಂದಿನ ದಿನಮಾನದಲ್ಲಿ ಸೇವಾ ಮನೋಭಾವನೆಯೊಂದಿಗೆ ನಿಲಜಗಿ ಕುಟುಂಬವು ಶೈಕ್ಷಣಿಕ ಕ್ಷೇತ್ರದಲ್ಲಿ ಅದಮ್ಯ ಸಾಧನೆ ಮಾಡಿದೆ ಎಂದು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಪ್ರಶಂಶಿಸಿದರು.

ಪಟ್ಟಣದ ಶ್ರೀ ಮಹಾವೀರ ಶಿಕ್ಷಣ ಸಂಸ್ಥೆಯ ಶ್ರೀಮತಿ ವಿಜಯಮಾಲಾ ವ. ನಿಲಜಗಿ ಬಿ.ಎಸ್.ಸಿ./ಬಿ.ಕಾಂ. ಪದವಿ ಮಹಾವಿದ್ಯಾಲಯ ಪ್ರಾರಂಭೋತ್ಸವ, ಕಾಲೇಜಿನ ನೂತನ ಕಟ್ಟಡ ಹಾಗೂ ವಸತಿ ಗೃಹಗಳ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ನಿಲಜಗಿ ಕುಟುಂಬ ಸಂಸ್ಥೆಗಳನ್ನು ಕಟ್ಟುತ್ತಾ ತಾವು ಬದುಕುವುದರ ಜೊತೆಗೆ ಎಲ್ಲ ಸಮುದಾಯದ ಜನರನ್ನು ಬದುಕಿಸುತ್ತಿದೆ ಎಂದು ವರೂರಿನ ಶ್ರೀ ಭೀಮಸೇನ ಭಟ್ಟಾರಕ ಮಹಾಸ್ವಾಮೀಜಿಯವರು ತಿಳಿಸಿದರು.

ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಎನ್.ಆರ್.ಪುರ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ, ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರು ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ, ನಾಂದಣಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಜಿನಸೇನ ಭಟ್ಟಾರಕ ಮಹಾಸ್ವಾಮೀಜಿ, ಕೊಲ್ಹಾಪುರ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ, ಹೆಚ್.ಎಂ. ವೀರರಾಜಯ್ಯ, ಶಾಸಕ ಅಭಯ ಪಾಟೀಲ್, ಉತ್ತಮ ಪಾಟೀಲ್, ವಿನೋದ್ ದೊಡ್ಡಣ್ಣವರ, ಧನ್ಯಕುಮಾರ್ ಗುಂಡೆ ಇನ್ನಿತರರು ಮಾತನಾಡಿದರು.

ಮಹಾವೀರ ಸಮೂಹ ಸಂಸ್ಥೆಗಳ ಅಧ್ಯಕ್ಷ ಮಹಾವೀರ ನಿಲಜಗಿ ಅಧ್ಯಕ್ಷತೆ ವಹಿಸಿದ್ದರು. ಪದ್ಮನಾಭ ಚೌಗಲಾ ಪ್ರಾಸ್ತಾವಿಕ ಮಾತನಾಡಿದರು. ಡಾ. ನೇಮಿನಾಥ ಮಗದುಮ್ಮ ಸಂಜಯ ನಿಲಜಗಿ, ಬಾಹುಬಲಿ ಸೊಲ್ಲಾಪೂರೆ, ರೋಗಿತ್ ಚೌಗಲಾ, ರಾಜೇಂದ್ರ ಪಾಟೀಲ, ಸಂತೋಷ ರಜಪೂತ, ಸಹಕಾರಿ ಸಂಸ್ಥೆಯ ನಿರ್ದೇಶಕರು ಉಪಸ್ಥಿತರಿದ್ದರು. ಡಾ. ಎಂ.ಎಸ್. ಕರಾಡೆ ನಿರೂಪಿಸಿದರು. ಪ್ರಜ್ವಲ್ ನಿಲಜಗಿ ವಂದಿಸಿದರು.

## 36ನೇ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ



**ಬೆಂಗಳೂರು :** ಅ. 27, ಭಾನುವಾರದಂದು ಬೆಂಗಳೂರಿನ ಕರ್ನಾಟಕ ಜೈನ ಭವನದ ಭವ್ಯ ಸಭಾಂಗಣದಲ್ಲಿ ನಡೆದ ಟ್ರಸ್ಟಿನ 36ನೇ ವಾರ್ಷಿಕೋತ್ಸವ, 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ಹಾಗೂ 25ನೇ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಪದ್ಮರಾಜ ದೇಸಾಯಿ ಅವರ ಉದ್ಘಾಟನೆಯೊಂದಿಗೆ, ಟ್ರಸ್ಟಿನ ಚೇರ್ಮನ್ ಶ್ರೀ ಎಸ್.ಜಿತೇಂದ್ರ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 2.30 ಗಂಟೆಗೆ ಸಂಪನ್ನಗೊಂಡಿತು.

ಧೀರಜ್ ಜೈನ್ ಮಂಗಲಾಚರಣೆಯ ನಂತರ ಪಿ.ವೈ. ರಾಜೇಂದ್ರ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಶ್ರೀಗಳವರಿಗೆ ಹಾಗೂ ಗಣ್ಯರಿಗೆ ಭಕ್ತಿ ಸಮರ್ಪಣೆ ನಂತರ ಪೂಜ್ಯ ಶ್ರೀಗಳವರು ಇಸ್ರೋ ಸಂಸ್ಥೆಯ ಹಿರಿಯ ವಿಜ್ಞಾನಿ ಶ್ರೀಮತಿ ಅನುರಾಧ ಬಿ. ದೇಸಾಯಿಯವರಿಗೆ 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿಯನ್ನು ಪ್ರಶಸ್ತಿ ಫಲಕ, 25,000.00 ರೂಪಾಯಿಗಳ ಗೌರವಧನ ನೀಡಲಾಯಿತು. ಪ್ರಶಸ್ತಿ ಸ್ವೀಕರಿಸಿದ ಶ್ರೀಮತಿ ಅನುರಾಧ ದೇಸಾಯಿ ಅವರು ಇಸ್ರೋ ಸಂಸ್ಥೆಯಲ್ಲಿ ಅವರ ಸಾಧನೆ ಮತ್ತು ಚಂದ್ರಯಾನ 2 ಮತ್ತು 3ರ ಯಶಸ್ವೀ ಉಡಾವಣೆಯ ಬಗೆಗಿನ ವಿವರಗಳನ್ನು ನೀಡಿದರು.

ನಂತರ ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್ ಅವರು ಪಿಯುಸಿ ಯಲ್ಲಿ ಶೇಕಡ 95ಕ್ಕಿಂತ ಹೆಚ್ಚು ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಶೇಕಡಾ 97ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಲ್ಲ 44 ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಿ ಪ್ರತಿಭಾ ಪುರಸ್ಕಾರದ ಪ್ರಶಸ್ತಿ ಪತ್ರ ಪ್ರದಾನ ಮಾಡಿ, ಪುರಸ್ಕಾರದ ಮೊಬಲಗನ್ನು (ಆನ್ ಲೈನ್ ಮೂಲಕ) ಕಳುಹಿಸಿ ಕೊಡಲಾಗುವುದೆಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಅವರು ಹಿತವಚನ ನೀಡಿದ ನಂತರ ಶ್ರೀ ಎಸ್.ಜಿತೇಂದ್ರ ಕುಮಾರ್ ಅವರು ಅಧ್ಯಕ್ಷ ಭಾಷಣದಲ್ಲಿ ಎಲ್ಲರಿಗೂ ಶ್ರೇಯೋಭಿವೃದ್ಧಿಯಾಗಲೆಂದು ಹಾರೈಸಿದರು.

WWW.HOMBUJAPADMAVATI.ORG

ಪೂಜ್ಯಶ್ರೀಗಳ ಮಂಗಲ ಆಶೀರ್ವಚನದ ನಂತರ ಎ.ಸಿ. ವಿದ್ಯಾಧರ್‌ರವರು ವಂದನಾರ್ಪಣೆ ಮಾಡಿದರು. ನಂತರ ಕಾರ್ಯಕರ್ತರಿಗೆ ಗೌರವ ಸಮರ್ಪಣೆ, ಕುಮುದಾ ನಾಗಭೂಷಣ್, ಡಾ. ಅಶ್ವಿನಿ ಅಶೋಕ್‌ಕುಮಾರ್ ನಿರೂಪಣೆ ಮಾಡಿದರು.

## ಜೈನ ಜನಪದ 2024 ಸೀಸನ್ 2 ಫೈನಲ್ಸ್ ಕಾರ್ಯಕ್ರಮ



**ಎನ್.ಆರ್.ಪುರ:** ಶ್ರೀ ಕ್ಷೇತ್ರ ಬಸ್ತಿಮಠ ಇವರ ಆಶ್ರಯದಲ್ಲಿ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿಯವರ ಶುಭಾಶೀರ್ವಾದೊಂದಿಗೆ ಕರ್ನಾಟಕದಲ್ಲಿ ಜೈನಧರ್ಮ ಬಳಗ, ಸುಹಾಸ್ತಿ ಯುವ ಜೈನ್‌ಮಿಲನ್ ಬೆಂಗಳೂರು ಮತ್ತು ಜಿನಗಾನ ಸುಧಾ ಬಳಗ ಇವರ ಆಯೋಜನೆಯಲ್ಲಿ ಜೈನ ಜನಪದ 2024 ಸೀಸನ್ 2 ಫೈನಲ್ಸ್ ಕಾರ್ಯಕ್ರಮವು ಅ. 20 ರಂದು ನೆರವೇರಿತು.

ಜೈನ ಜನಪದವನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ದಾಟಿಸುವ ಇಂತಹ ಮಹಾನ್ ಕಾರ್ಯಕ್ರಮವನ್ನು ಶ್ರೀ ಶಾಂತಿನಾಥ ಉಪಾಧ್ಯೆ ಪ್ರತಿಷ್ಠಾಚಾರ್ಯರು ಬೆಳಗಾವಿ ಹಾಗೂ ಡಾ. ಅಜಿತ್ ಮುರುಗುಂಡೆ ವಿಶೇಷಾಧಿಕಾರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಬೆಂಗಳೂರು ಇವರು ಉದ್ಘಾಟಿಸಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಜ್ಯೋತಿ ನೇಮಿರಾಜ್. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಡಾ. ಎಸ್.ಪಿ. ಪದ್ಮಪ್ರಸಾದ್, ಆಯುರ್ವೇದ ವೈದ್ಯರಾದ ಡಾ ಜೀವಂಧರ್ ಜೈನ್. ಶ್ರೀಮತಿ ಪದ್ಮಪ್ರಕಾಶ್, ಶ್ರೀ ವಿಜಯೇಂದ್ರ ಜೈನ್ ಚಿಕ್ಕೋಡು. ಡಾ. ನೀರಜಾ ನಾಗೇಂದ್ರ ಕುಮಾರ್ ಬೆಂಗಳೂರು. ಕೆ.ಜೆ.ಎ. ನಿರ್ದೇಶಕರಾದ ಶ್ರೀ ರತ್ನಕುಮಾರ್ ಜೈನ್ ಆಗಮಿಸಿ ವೇದಿಕೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗು ನೀಡಿದರು.

ಜೈನ ಜನಪದದ ಪ್ರತಿವರ್ಷ ಜೈನ ಜನಪದ ಸಾಧಕರಿಗೆ ಕೊಡಮಾಡುವ ಪ್ರಶಸ್ತಿಗೆ ಶ್ರೀಮತಿ ಭಾರತಿ ಭಬ್ಬಿ ಶಿಗ್ಗಾವಿ ಇವರನ್ನು ಆಯ್ಕೆ ಮಾಡಿ 'ಜೈನ ಜನಪದ ಸಿರಿ' ಪುರಸ್ಕಾರವಿತ್ತು ಗೌರವಿಸಲಾಯಿತು.

ಜೈನ ಜನಪದ ಹಾಡುವ ಸ್ಪರ್ದೆಗೆ ರಾಜ್ಯದಾದ್ಯಂತ ಸುಮಾರು 55 ತಂಡಗಳು ಭಾಗವಹಿಸಿದ್ದು ಫೈನಲ್ ಗೆ 13 ತಂಡಗಳು ಆಯ್ಕೆಯಾಗಿದ್ದವು. ಅದರಲ್ಲಿ ಪ್ರಥಮ ಬಹುಮಾನ ವಿಜೇತರಾಗಿ ತಂಡ ಬೆಳಗಾವಿ, ದ್ವಿತೀಯ ಬಹುಮಾನ ಜಿನವಾಣಿ ಭಜನಾ ತಂಡ ಚಿಕ್ಕೋಡಿ, ತೃತೀಯ ಬಹುಮಾನ ಪ್ರಾಂಜಲಿ ಜೈನ್ ಕಾರ್ಕಳ, ಸಮಾಧಾನಕರ ಬಹುಮಾನವನ್ನು ಜೋಸ್ನ ಜೈನ್ ಕೆನಡಾ ಇವರು ಪಡೆದುಕೊಂಡರು.

ಈ ಕಾರ್ಯಕ್ರಮದ ತೀರ್ಪುಗಾರರಾಗಿ ಎಸ್.ಪಿ. ಪದ್ಮಪ್ರಸಾದ್ ಹಾಗೂ ನವೀನ್ ಪ್ರಸಾದ್ ಜಾಂಬೈ ಉಪಸ್ಥಿತರಿದ್ದರು. ನಿರೂಪಣೆಯನ್ನು ಕುಮುದ ನಾಗಭೂಷಣ್, ಬಾಹುಬಲಿ ಉಪಾಧ್ಯೆ ನೆರವೇರಿಸಿದರು.

### ಆರನೇ ದಿನದ ಇಂದ್ರಧ್ವಜ ಮಹಾಮಂಡಲ ವಿಧಾನ

## "ಜಿನಾಲಯಗಳ ದರ್ಶನದಿಂದ ಆಧ್ಯಾತ್ಮಿಕ ಜೀವನ"

–ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು



**ಹೊಂಬುಜ (18-11-24) :** ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಏರ್ಪಡಿಸಿದ 'ಇಂದ್ರಧ್ವಜ ಮಹಾಮಂಡಲ ವಿಧಾನ' ಆರನೆಯ ದಿನದ ಜಿನಾಲಯಗಳಿಗೆ ಧ್ವಜ ಆರೋಹಿಸಲಾಯಿತು. ಶ್ರವಣಬೆಳಗೊಳ ಶ್ರೀಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಆರಂಭಗೊಂಡಿತು. ವಿವಿಧ ಜಿನಾಲಯಗಳಿಗೆ ಧ್ವಜ ಏರಿಸುವ ಮೂಲಕ ಆಧ್ಯಾತ್ಮಿಕ ಜೀವನ ಸಾರ್ಥಕವಾಗುವುದೆಂದು ಹೊಂಬುಜ ಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು. ಕನಕಗಿರಿ ಶ್ರೀಮಠದ ಜಗದ್ಗುರು ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಶ್ರೀಕ್ಷೇತ್ರಕ್ಕೆ ಆಗಮಿಸಿ ಪೂಜಾ ವಿಧಿ ವಿಧಾನದಲ್ಲಿದ್ದ ಶ್ರಾವಕರನ್ನು ಹರಸಿದರು.

ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿಜಯಕುಮಾರ ಪಾಟೀಲ, ಕರ್ನಾಟಕ ಸರ್ಕಾರದ ಯೋಜನಾ ಅನುಷ್ಠಾನ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ಇಂದ್ರಧ್ವಜ ಮಹಾಮಂಡಲ ವಿಧಾನದ ಪೂಜೆಯಲ್ಲಿ ಪಾಲ್ಗೊಂಡರು. ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಅಧ್ಯಕ್ಷ ಧರ್ಮಸ್ಥಳ ಡಿ. ಸುರೇಂದ್ರ ಕುಮಾರ್‌ರವರು ನಿತ್ಯ ಅಭಿಷೇಕದಲ್ಲಿ ಭಾಗಿಯಾದರು.

## ಪ್ರತಿಭಾ ಪುರಸ್ಕಾರ:



ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ತರಗತಿಯಲ್ಲಿ 2023-24ನೇ ಸಾಲಿನಲ್ಲಿ ಅತ್ಯದಿಕ ಅಂಕ ಗಳಿಸಿರುವ ಶಿವಮೊಗ್ಗ ಜಿಲ್ಲೆಯ ಜೈನ ವಿದ್ಯಾರ್ಥಿ-ವಿದ್ಯಾರ್ಥಿನಿಂಯರಿಗೆ ಹೊಂಬುಜ ಶ್ರೀಗಳವರು ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು.

## ಸೇವಾಕಾಂಕ್ಷಿಗಳಿಗೆ ಸನ್ಮಾನ:







ಹೊಂಬುಜ ಶ್ರೀಮಠದ ಸಂಪರ್ಕವಿದ್ದು ಸೇವೆ ಮಾಡುತ್ತಿರುವ ಡಿ.ಆರ್. ಅಂಗಡಿ, ವರಂರ ಕ್ಷೇತ್ರದ ವ್ಯವಸ್ಥಾಪಕರಾಗಿದ್ದ ಯುವರಾಜ ಆರಿಗ, ಹೊಂಬುಜ ಶ್ರೀಮಠದ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ ನೇ. ಮಗದುಮ್ಮ ಅವರಿಗೆ "ಸನ್ನಿಧಿ ಸೇವಾ ರತ್ನ" ಬಿರುದು ನೀಡಿ ಅಭಿನಂದಿಸಲಾಯಿತು.

## ಸಪ್ತಮ ದಿನದ ಇಂದ್ರಧ್ವಜ ಮಹಾಮಂಡಲ ವಿಧಾನ

# "ಚೈತ್ಯಾಲಯ ದರ್ಶನದಿಂದ ಕರ್ಮನಿರ್ಜರೆ"

**-ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು**



**ಹೊಂಬುಜ (19-11-24): ಜಿನಮಂದಿರವನ್ನು ಚೈತ್ಯಾಲಯವೆಂದು ಉಲ್ಲೇಖಿಸಿರುವುರಿಂದ ಏಕಾಗ್ರತೆಗಾಗಿ ನಿರ್ಮಿಸಿದ ಧ್ಯಾನ ಮಂದಿರ ಮತ್ತು ಜಿನಬಿಂಬಗಳ ದರ್ಶನದಿಂದ ಕರ್ಮನಿರ್ಜರೆಯಾಗುವುದು** ಎಂದು ಕನಕಗಿರಿ ಶ್ರೀ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ತಮ್ಮ ಧರ್ಮಪ್ರವಚನದಲ್ಲಿ ತಿಳಿಸಿದರು.

ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ನಡೆಯುತ್ತಿರುವ "ಇಂದ್ರಧ್ವಜ ಮಹಾಮಂಡಲ ವಿಧಾನ" ಪೂಜಾ ವಿಧಿಯಲ್ಲಿ ಉಪಸ್ಥಿತರಿದ್ದರು. ಚಿತ್ತ ವಿಕೃತಿಗಳಿಂದ ಜರ್ಜರಿತರಾಗುವ ಬದಲು ಚೈತ್ಯಾಲಯದಲ್ಲಿ ಮನೋಧರ್ಮವನ್ನು ಆಧ್ಯಾತ್ಮಿಕ ಚಿಂತನದತ್ತ ಕೇಂದ್ರೀಕರಿಸುವುದು ಅತ್ಯಂತ ಶ್ರೇಷ್ಠ ದಿನಚರ್ಯೆ ಎಂದು ಶ್ರಾವಕ-ಶ್ರಾವಿಕೆಯರನ್ನು ಹರಸಿದರು.

ಪ್ರಕೃತಿಯ ಆರಾಧನೆಯ ಮಹತ್ವವನ್ನು ಜೈನಧರ್ಮಶಾಸ್ತ್ರಗಳ ಪೂಜಾ ವಿಧಿಗಳು ತಿಳಿಸುತ್ತವೆ. ಇಂದ್ರಧ್ವಜ ಮಹಾಮಂಡಲದಲ್ಲಿ ಪ್ರಾಣಿ, ಪಕ್ಷಿ, ವನ, ಜಲ ಪ್ರದೇಶ, ಪರ್ವತ ಶ್ರೇಣಿಗಳನ್ನು ವರ್ಣಿಸಲಾಗಿದೆ ಎಂದು ಮೂಡುಬಿದಿರೆ ಶ್ರೀ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವಿವರಿಸಿದರು. ಪೂಜಾ ವಿಧಾನದಲ್ಲಿ ತಲ್ಲೀನತೆಯಿಂದ ಮಂತ್ರಗಳನ್ನು ಪಠಿಸಿ, ಆರಾಧಿಸುವುದು ನವ ಚೈತನ್ಯದ ಅನುಭವವುಂಟಾಗುವುದೆಂದು ತಿಳಿಸಿ ಹರಸಿದರು.


ಆರತೀಪುರ ಶ್ರೀ ಜೈನ ಮಠದ ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಜೈನ ಧರ್ಮದಲ್ಲಿ ಆಗಮೋಕ್ತ ಪೂಜಾ ವಿಧಾನಗಳು ಮಾನಸಿಕ, ಶಾರೀರಿಕ ಸುಖ ನೀಡುವುದು. ಉತ್ತಮ ಧರ್ಮ ಮೌಲ್ಯಾಧಾರಿತ ಜೀವನಕ್ಕೆ ಸತ್‌ಪ್ರೇರಣೆ ನೀಡುವುದು ನಿಶ್ಚಿತ ಎಂಬ ವಿಚಾರವನ್ನು ಪೂಜಾ ವಿಧಾನದಲ್ಲಿ ಪಾಲ್ಗೊಂಡವರಿಗೆ ಮನನ ಮಾಡಿ, ಹರಸಿದರು.

ಕೊಲ್ಹಾಪುರ ಶ್ರೀಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿಗಳವರು ಶ್ರೀಕ್ಷೇತ್ರಕ್ಕಾಗಮಿಸಿ ಪೂಜಾ ವಿಧಾನದಲ್ಲಿ ಉಪಸ್ಥಿತರಿದ್ದು ಶ್ರಾವಿಕ-ಶ್ರಾವಕಿಯರನ್ನು ಆಶೀರ್ವದಿಸಿದರು.

## ಹೊಂಬುಜ ಶ್ರೀಗಳ ಪಟ್ಟಾಭಿಷೇಕ ವರ್ಧಂತ್ಯುತ್ಸವ

# "ಸ್ವಜ್ಞಾನದಿಂದ ಸುಜ್ಞಾನದೆಡೆಗೆ ಸಾಗೋಣ-ಜಿನಮಾರ್ಗವು ಶುಭ ಭಾವನೆಗೆ ಪ್ರೇರಣೆ"

**-ಪರಮಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು**



**ಹೊಂಬುಜ : ಜೀವನದಲ್ಲಿ ಪಾಪ ಪುಣ್ಯ ಕಾರ್ಯಗಳು ಹಾಸುಹೊಕ್ಕಾಗಿದ್ದರೂ ಕರ್ತವ್ಯ ಬದ್ಧತೆಯಿಂದ ಧಾರ್ಮಿಕ ಪಥವನ್ನು ತೊರೆಯಬಾರದು** ಎಂದು ಹೊಂಬುಜ ಜೈನಮಠದ ಪೀಠಾಧಿಕಾರಿಯಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಪಟ್ಟಾಭಿಷೇಕದ 13ನೇ ವರುಷದ ವರ್ಧಂತ್ಯುತ್ಸವ ನ. 21ರಂದು ಪರಂಪರಾನುಗತ ಧಾರ್ಮಿಕ ವಿಧಿಗಳನ್ನು ನೆರವೇರಿಸಿ ಸಂದೇಶವಿತ್ತರು. ಪೂರ್ವ ಭಟ್ಟಾರಕರ ಸಮರ್ಪಣಾಭಾವವು ಶ್ರೀಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ ವಿಸ್ತೃತ ಯೋಜನೆಗೆ ನಾಂದಿಯಾಗಿದೆ. ಕಳೆದ 12 ವರ್ಷಗಳ ಅವಧಿಯಲ್ಲಿ ಕ್ಷೇತ್ರದ ಅಧಿನಾಯಕ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿಯವರ ಕೃಪೆಯಿಂದ ಜಿನಾಲಯದ ನಿರ್ಮಾಣ, ಭಕ್ತರಿಗೆ ವಸತಿ ಸಮುಚ್ಚಯ, ಆಂಗ್ಲಮಾಧ್ಯಮ ಶಾಲೆ, ಗುರುಕುಲ, ಗೋಶಾಲೆ ಹಾಗೂ ಅಧೀನ ಕ್ಷೇತ್ರಗಳಾದ ಕುಂದಾದ್ರಿ, ವರಂಗ, ಹಟ್ಟಿಯಂಗಡಿಯಲ್ಲಿಯೂ ಅಭಿವೃದ್ಧಿಯಾಗುತ್ತಿದೆ ಎಂದ ಸ್ವಸ್ತಿಶ್ರೀಗಳವರು ಜೈನಾಗಮದಲ್ಲಿ ಉಲ್ಲೇಖಿಸಿದಂತೆ ಮತ್ತು ಮುನಿವರ್ಯರ, ಆರ್ಯಿಕೆಯರ ಶುಭಾಶೀರ್ವಾದಗಳೊಂದಿಗೆ ಶ್ರೀಕ್ಷೇತ್ರ ಹೊಂಬುಜ ದರ್ಶನಾರ್ಥಿಗಳ 'ಪುಣ್ಯ ಪಾವನ ಕ್ಷೇತ್ರ' ವಾಗಿದೆ ಎಂದರು. **ಸ್ವಜ್ಞಾನದಿಂದ ಸುಜ್ಞಾನದೆಡೆಗೆ ಸಾಗೋಣ, ಜಿನಮಾರ್ಗವು ಶುಭ ಭಾವನೆಗೆ ಪ್ರೇರಣೆಯಾಗಲಿ. ಕ್ಷೇಮಂ ಸರ್ವ ಪ್ರಜಾನಾಂ** ಎಂದು ಭಕ್ತವೃಂದದವರನ್ನು ಆಶೀರ್ವದಿಸಿದರು.

ಪ್ರಾತಃ ಕಾಲ ನಿತ್ಯಪೂಜೆಯನ್ನು ನೆರವೇರಿಸಿ, ಶ್ರೀ ಮಠದ ಶ್ರೀ ನೇಮಿನಾಥ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀ ಕೂಷ್ಮಾಂಡಿನಿ ದೇವಿ ಸನ್ನಿಧಿಯಲ್ಲಿ ಸ್ವಸ್ತಿಶ್ರೀಗಳವರು ಪೂಜೆ ಸಲ್ಲಿಸಿದರು. ಕ್ಷೇತ್ರದ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಜಿನಮಂದಿರದಲ್ಲಿ ದರ್ಶನ ಪಡೆದು ಪಟ್ಟದ ಪೀಠದಲ್ಲಿ ಆಸೀನರಾದರು. ಸ್ವಸ್ತಿವಾಚನ, ಪಾದ ಪೂಜೆಯನ್ನು ಪದ್ಮರಾಜ ಇಂದ್ರ ಹಾಗೂ ಸಹಪುರೋಹಿತರು ನೆರವೇರಿಸಿದರು.

ಊರ ಪರವೂರ ಭಕ್ತರು, ಹುಂಚ ಜೈನ ಸಮಾಜ, ಶ್ರೀ ಪದ್ಮಾವತಿ ಮಹಿಳಾ ಮಂಡಲ, ಗುರುಕುಲದ ವಿದ್ಯಾರ್ಥಿಗಳು, ಶ್ರೀಮಠದ ಸೇವಾಕಾಂಕ್ಷಿಗಳು ಸ್ವಾಮೀಜಿಯವರಿಂದ ಶ್ರೀ ಫಲ ಮಂತ್ರಾಕ್ಷತೆ ಪಡೆದರು.

WWW.HOMBUJAPADMAVATI.ORG

## ಇಂದ್ರಧ್ವಜ ಮಹಾಮಂಡಲ ವಿಧಾನ ಸಂಪನ್ನ

# "ಅತಿಶಯ ಪ್ರಭಾವನೆಯ ಆರಾಧನೆ ಸತ್‌ಪರಿಣಾಮವು ಸರ್ವರಿಗೂ ಸುಖ, ಆರೋಗ್ಯ ನೀಡುವುದು"

**-ಪರಮಪೂಜ್ಯ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು**



**ಹೊಂಬುಜ:** ಜೈನ ಧರ್ಮದ ಆಚರಣೆಯ ಅವಿಭಾಜ್ಯ ಅಂಗವಾಗಿ ಆರಾಧನೆ, ವಿಧಾನ ಪೂಜೆಗಳನ್ನು ಆಗಮೋಕ್ತ ಶಾಸ್ತ್ರದಲ್ಲಿ ವಿವರಿಸಲಾಗಿದೆ. ಹೊಂಬುಜದಲ್ಲಿ ಎಂಟು ದಿನಗಳ ಪರ್ಯಂತ ಇಂದ್ರಧ್ವಜ ಮಹಾಮಂಡಲ ಆರಾಧನೆಯಲ್ಲಿ ಶ್ರಾವಕ-ಶ್ರಾವಿಕೆಯರು ಭಕ್ತಿ ಶ್ರದ್ಧೆಗಳಿಂದ ಪಾಲ್ಗೊಂಡಿರುವುದು ಆಧ್ಯಾತ್ಮಿಕ ಪಥವನ್ನು ಭದ್ರಗೊಳಿಸಬಲ್ಲುದು ಎಂದು ಕಾರ್ಕಳ ಶ್ರೀ ಜೈನ ಮಠದ ಪರಮಪೂಜ್ಯ ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ತಮ್ಮ ಪ್ರವಚನದಲ್ಲಿ ತಿಳಿಸಿದರು. ಅತಿಶಯ ಪ್ರಭಾವನೆಯ ಆರಾಧನೆ-ವಿಧಾನದ ಸತ್‌ಪರಿಣಾಮವು ಸರ್ವರಿಗೂ ಸುಖ, ಆರೋಗ್ಯ ನೀಡುವುದು ಎಂದು ಆಶೀರ್ವದಿಸಿ ಹರಸಿದರು.

ಸಾನಿಧ್ಯ ವಹಿಸಿದ್ದ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಿ, ದೇವ-ಋಷಿ-ಪಿತೃ ತರ್ಪಣದ ಮೂಲಕ ನಾವು ಪರಮಾತ್ಮನನ್ನು ಕಾಣಬೇಕು. ಆಗಲೇ ಭವ ಬಂಧನದಿಂದ ಮುಕ್ತಿಗೊಂಡು, ಸುಖಸಾಗರದ ದಡ ಸೇರಬಹುದು. ಚಿತ್ತದಿಂದ ಪ್ರಾಪಂಚಿಕ ವಸ್ತುಗಳ ನಾಶ ಮಾಡಿಕೊಂಡು ಧರ್ಮ ಮಾರ್ಗ ಅನುಸರಿಸಿ ನಡೆದರೆ ಜೀವನದಲ್ಲಿ ಸಾರ್ಥಕ ಅತ್ಮಾನುಭವ ಸಿಗಲಿದೆ ಎಂದರು.

ಆರ್ಯಿಕಾರತ್ನ ಶ್ರೀ 105 ಶಿವಮತಿ ಮಾತಾಜಿ, ಆರ್ಯಿಕಾ ಶ್ರೀ 105 ಪದ್ಮಶ್ರೀ ಮಾತಾಜಿಯವರು ಇಂದ್ರಧ್ವಜ ಆರಾಧನಾ ವಿಧಾನದಲ್ಲಿ ಉಪಸ್ಥಿತರಿದ್ದರು. ಪ್ರಪ್ರಥಮವಾಗಿ ಏರ್ಪಡಿಸಿದ ಆರಾಧನಾ ವಿಧಾನದಲ್ಲಿ ಶ್ರಾವಕ-ಶ್ರಾವಕೆಯರು ವ್ರತಧಾರಿಗಳಾಗಿ ನಿಷ್ಠೆಯಿಂದ ಪಾಲ್ಗೊಂಡರು. ಬಳಿಕ ರಜತ ರಥೋತ್ಸವದಲ್ಲಿ ಊರ, ಪರವೂರ ಭಕ್ತರು ಭಾಗಿಯಾದರು.

ಎಂಟು ದಿನಗಳ ಕಾಲ ಸೋಂದಾ ದಿಗಂಬರ ಜೈನ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ಉಪಸ್ಥಿತರಿದ್ದು, ಇಂದ್ರಧ್ವಜ ಮಹಾಮಂಡಲ ಆರಾಧನೆಯ ವಿಧಿಗಳು ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತ್ತು.

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯ 1000-00 ಮಾತ್ರ

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722